**ದಿಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಡಿ.ಎಸ್.ಎ ವಕೀಲರಿಂದಃ**

**ವಾದಿಯ ಪರವಾಗಿಃ**

**26)** ನನ್ನ ಗಂಡ ದಾವಾ ಆಸ್ತಿಗಳಲ್ಲಿ ದಾವಾ ಶೆಡ್ಯೂಲ್ ಎ ಸಿ.ಟಿ ಸರ್ವೆ ನಂಬರಃ 173/ಬಿ/2 1996 ನೇ ಇಸ್ವಿಯಲ್ಲಿ ಈ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದಾರೆ. ಸದರಿ ಆಸ್ತಿಯ ಮೂಲ ಮಾಲೀಕರು ಚನ್ನವೀರಗೌಡ ಕೊಟ್ರಗೌಡ ಪಾಟೀಲ ಅಂತಾ ಇದ್ದರು. ದಿನಾಂಕಃ 11.03.1996 ರಲ್ಲಿ ಸಿ.ಟಿ ಸರ್ವೆ ನಂಬರಃ 173/ಬಿ ಈ ಆಸ್ತಿಯನ್ನು ನನ್ನ ಗಂಡ ಖರೀದಿ ಹಿಡಿಯುವ ಮೊದಲು ಖರೀದಿ ಪತ್ರ ಮಾಡಿಕೊಂಡಿದ್ದ ಅಂದರೆ ಸರಿ. ನಾನು ಮತ್ತು ನನ್ನ ಗಂಡ 1998 ರಲ್ಲಿ ಬೇರೆಯಾಗಿದ್ದೇವೆ ಅಂದರೆ ಸರಿ. ನಾನು ಮತ್ತು ನನ್ನ ಗಂಡ ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದಾಗ ನನ್ನ ಗಂಡ ಸರ್ವೆ ನಂಬರಃ 173/ ಬಿ ಈ ಸಂಪೂರ್ಣ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದ ಅಂದರೆ ಸರಿ. ನನ್ನ ಗಂಡ ದಾವಾ ಶೆಡ್ಯೂಲ್ ಆಸ್ತಿಯಾದಂತಹ ಎ ಇಂದ ಎಫ್ ಆಸ್ತಿಗಳಲ್ಲಿ 2000 ರಲ್ಲಿ ಮನೆಗಳನ್ನು ಕಟ್ಟಿಸಿರುತ್ತಾರೆ.

**27)** ಸಿ.ಟಿ ಸರ್ವೆ ನಂಬರಃ 173/ಬಿ/1 ಈ ಆಸ್ತಿಯಲ್ಲಿ 5 ಮನೆಗಳು ಇರುತ್ತವೆ ಅಂದರೆ ಸರಿ. ಅದೇ ರೀತಿ ಸಿ.ಟಿ ಸರ್ವೆ ನಂಬರಃ 173/ಬಿ/3 ಈ ಆಸ್ತಿಯಲ್ಲಿ 4 ಮನೆಗಳು ಇರುತ್ತವೆ ಅಂದರೆ ಸರಿ. ಸದರಿ ಸಿ.ಟಿ.ಸರ್ವೆ ನಂಬರಃ 173/ಬಿ/3 ಈ ಆಸ್ತಿಯಲ್ಲಿ 4 ಮನೆಗಳನ್ನು ಹೊರತುಪಡಿಸಿ ಅದರ ಮೇಲೆ ಖುಲ್ಲಾ ಜಾಗೆ ಇದೆ ಅಂದರೆ ಸರಿ. ಸದರಿ 4 ಮನೆಗಳು ಆದ ನಂತರ ಅವುಗಳ ಪೂರ್ವ ದಿಕ್ಕಿಗೆ ಖುಲ್ಲಾ ಜಾಗೆ ಇರುತ್ತದೆ

ಅಂದರೆ ಸರಿ. ಸಿ.ಟಿ.ಸರ್ವೆ ನಂಬರಃ 173/ಬಿ/3 ಈ ಆಸ್ತಿಯ ಪಶ್ಚಿಮ ದಿಕ್ಕಿಗೆ ಬಡಿಗೇರ ಎನ್ನುವವರು ವಾಸದಿಂದ ಇರುತ್ತಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಸಂಚಕಾರ ಪತ್ರ ಮಾಡಿಕೊಂಡಿರುತ್ತಾರೆ, ಆದರೆ ಖರೀದಿ ಪತ್ರ ಮಾಡಿಕೊಂಡಿರುವದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಡಿಗೇರ ಇವರು ಮಾಡಿಕೊಂಡಂತಹ ಖರೀದಿ ಸಂಚಕಾರ ಪತ್ರ ಆದಂತಹ ಆಸ್ತಿಯು ದಾವಾ ಶೆಡ್ಯೂಲ್ ಬಿ ಇರುತ್ತದೆ ಅಂದರೆ ಸರಿ. 2008 ನೇ ಇಸ್ವಿಯಲ್ಲಿ ಬಡಿಗೇರ ಇವರು ದಾವಾ ಶೆಡ್ಯೂಲಿ ಬಿ ಆಸ್ತಿಯನ್ನು ಖರೀದಿ ಸಂಚಕಾರ ಪತ್ರ ಮಾಡಿಕೊಂಡಿರುತ್ತಾರೆ. ಸದರಿ ದಾವಾ ಶೆಡ್ಯೂಲ್ ಬಿ ಆಸ್ತಿಯನ್ನು ನಾವು ಮಾರಾಟ ಮಾಡಲು ರೂ.3,20,000/- ಮಾತುಕತೆಯಾಗಿದ್ದು, ಅದರಲ್ಲಿ ರೂ.2,00,000/- ಹಣವನ್ನು ಕೊಟ್ಟಿದ್ದರು. ಸದರಿ ಖರೀದಿ ಸಂಚಕಾರ ಪತ್ರ ಆಗುವಾಗ ನನ್ನ ಗಂಡ ಜೀವಂತ ಇದ್ದರು.

**28)** ಸದರಿ ಖರೀದಿ ಸಂಚಕಾರ ಪತ್ರ ಆಗುವಾಗ ಅದರಲ್ಲಿ ಬರೆದಂತಹ ಸಂಗತಿಗಳ ಬಗ್ಗೆ ನನ್ನ ಗಂಡನಿಗೆ ಮಾಹಿತಿ ಇರುತ್ತದೆ. ದಾವಾ ಶೆಡ್ಯೂಲ್ ಬಿ ಆಸ್ತಿಗೆ ಸಂಬಂದಪಟ್ಟಂತೆ ಬಡಿಗೇರ ಇವರು ಖರೀದಿ ಸಂಚಕಾರ ಪತ್ರ ಮಾಡಿಕೊಂಡ ಬಳಿಕ ಬಡಿಗೇರ ಇವರು ನಮ್ಮ ವಿರುದ್ದ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಸಿವಿಲ್ ಪ್ರಕರಣ ದಾಖಲುಪಡಿಸಿಲ್ಲ ಅಂದರೆ ಸರಿ. ಅದೇ ರೀತಿ ಇಲ್ಲಿಯವರೆಗೆ ಜಯಶ್ರೀ ಇವರು ವಾದಿಗಾಗಲೀ ಹಾಗೂ ನನಗೆ ಯಾವುದೇ ರೀತಿ ನೋಟಿಸನ್ನು ಕೊಟ್ಟಿಲ್ಲ ಅಂದರೆ ಸರಿ. 2008 ರಲ್ಲಿ ದಾವಾ ಶೆಡ್ಯೂಲ್ ಬಿ ಆಸ್ತಿಗೆ ಸಂಬಂದಪಟ್ಟಂತೆ ಆದ ಖರೀದಿ ಕರಾರು ಪತ್ರವು ನೊಂದಣಿಯಾಗಿರುವದಿಲ್ಲ, ಆದರೆ ಕೇವಲ ಬಾಂಡ ಪೇಪರ ಮೇಲೆ ಬರೆಯಲಾಗಿರುತ್ತದೆ. ದಾವಾ ಶೆಡ್ಯೂಲ್ ಬಿ ಆಸ್ತಿಗೆ ಸಂಬಂದಪಟ್ಟಂತೆ

2008 ರಲ್ಲಿ ಖರೀದಿ ಕರಾರು ಪತ್ರ ಆಗಿರುತ್ತದೆ ಎಂದು ನಾನು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**29)** ಬಡಿಗೇರ ಇವರ ಮನೆಯ ಪೂರ್ವ ದಿಕ್ಕಿಗೆ ಬರುವಂತಹ ಮನೆಯಲ್ಲಿ ನಾನು ವಾಸವಾಗಿದ್ದೇನೆ ಅಂದರೆ ಸರಿ. ಅದೇ ರೀತಿ ನಮ್ಮ ಮನೆಯ ಪೂರ್ವ ದಿಕ್ಕಿಗೆ ಬರುವಂತಹ ಮನೆಯು ಮಹಾರಾಜಪೇಟ ಇವರಿಗೆ ಖರೀದಿಯಾಗಿರುತ್ತದೆ ಅಂದರೆ ಸರಿ. ಅದೇ ರೀತಿ ಮಹಾರಾಜಪೇಟ ಇವರ ಮನೆಯ ಪೂರ್ವ ದಿಕ್ಕಿಗೆ ಬರುವಂತಹ ದಾವಾ ಆಸ್ತಿಯ ಶೆಡ್ಯೂಲ್ ಡಿ ಆಸ್ತಿಯಾಗಿದ್ದು ಅದರಲ್ಲಿ ಗೀತಾ ಎನ್ನುವವರು ಬಾಡಿಗೆ ನಾತೆಯಿಂದ ವಾಸವಾಗಿದ್ದಾರೆ ಅಂದರೆ ಸರಿ. ದಾವಾ ಶೆಡ್ಯೂಲ್ ಡಿ ಮತ್ತು ಇ ಆಸ್ತಿಗಳಿಗೆ ಸಂಬಂದಪಟ್ಟಂತೆ ಗೀತಾ ಇವರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಡಿ ಮತ್ತು ಇ ಆಸ್ತಿಗಳ ಮೇಲೆ ಇರುವಂತಹ ಜಾಗೆಯು ಖುಲ್ಲಾ ಜಾಗೆ ಇರುತ್ತದೆ ಅಂದರೆ ಸರಿ. ಗೀತಾ ಇವರು ನನ್ನ ಅಣ್ಣನ ಹೆಂಡತಿ ಇರುತ್ತಾಳೆ ಅಂದರೆ ಸರಿ.

**30)** ನನ್ನ ಗಂಡ ಮತ್ತು ನನ್ನ ಅಣ್ಣನು ಎದುರುಬದುರಾಗಿ ಅಕ್ಕ ತಂಗಿಯರನ್ನು ಮದುವೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ದಾವಾ ಶೆಡ್ಯೂಲ್ ಎ ಆಸ್ತಿಯಾದಂತಹ ಸಿ.ಟಿ.ಸರ್ವೆ ನಂಬರಃ 173/ಬಿ/2 ಈ ಆಸ್ತಿಯನ್ನು ನನ್ನ ಗಂಡ ಪಾಟೀಲ ಇವರಿಗೆ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಅದೇ ರೀತಿ ಪಾಟೀಲ ಇವರು ದಾವಾ ಶೆಡ್ಯೂಲ್ ಎ ಆಸ್ತಿಯನ್ನು ಖರೀದಿ ಕರಾರು ಪತ್ರ ಮಾಡಿಕೊಂಡ ನಂತರ ಇಲ್ಲಿಯವರೆಗೆ ವಾದಿಯರ ವಿರುದ್ದ ಮತ್ತು ನನ್ನ ವಿರುದ್ದ ಪ್ರಕರಣವನ್ನು ದಾಖಲು ಮಾಡಿಲ್ಲ ಮತ್ತು ನೋಟಿಸ ಕೊಟ್ಟಿಲ್ಲ ಅಂದರೆ ಸರಿ. ಬಡಿಗೇರ ಇವರಾಗಲೀ ಮತ್ತು ಪಾಟೀಲ ಇವರಾಗಲೀ ನನ್ನ

ಗಂಡನಿಗೆ ಖರೀದಿ ಕರಾರು ಪತ್ರ ಆದ ನಂತರ ಅವರು ಇಲ್ಲಿಯವರೆಗೆ ಸದರಿ ಖರೀದಿ ಕರಾರು ಪತ್ರಗಳ ಆಧಾರದ ಮೇಲೆ ಇಲ್ಲಿಯವರೆಗೆ ನನಗೆ ಮತ್ತು ನನ್ನ ಗಂಡನಿಗೆ ಯಾವುದೇ ನೋಟಿಸ ಕೊಟ್ಟಿಲ್ಲ ಮತ್ತು ಯಾವುದೇ ಪ್ರಕರಣಗಳನ್ನು ದಾಖಲಿಸಿರುವದಿಲ್ಲ ಅಂದರೆ ಸರಿ.

**31)** ದಿನಾಂಕಃ 15.06.1996 ನೇ ಇಸ್ವಿಯಲ್ಲಿ ನನ್ನ ಗಂಡ ದಾವಾ ಶೆಡ್ಯೂಲ್ ಎ ಅಸ್ತಿಯಾದಂತಹ ಸಿ.ಟಿ.ಸರ್ವೆ ನಂಬರಃ 173/ಬಿ/2 ಹಾಗೂ ದಾವಾ ಶೆಡ್ಯೂಲ್ ಬಿ ಆಸ್ತಿಯಾದಂತಹ ಸಿ.ಟಿ.ಸರ್ವೆ ನಂಬರಃ 173/ಬಿ/3 ಈ ಆಸ್ತಿಗಳನ್ನು ನನ್ನ ಗಂಡ ಮತ್ತು ನಾನು ಖರೀದಿಗೆ ತೆಗೆದುಕೊಂಡಿರುತ್ತೇವೆ. ಆ ರೀತಿ ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳನ್ನು ನಾನು ಮತ್ತು ನನ್ನ ಗಂಡ 1996 ನೇ ಇಸ್ವಿಯಲ್ಲಿ ಖರೀದಿಗೆ ತೆಗೆದುಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಿ.ಟಿ ಸರ್ವೆ ನಂಬರಃ 173/ಬಿ ಈ ಸಂಪೂರ್ಣ ಆಸ್ತಿಯು ನಾವು ಖರೀದಿ ಮಾಡುವಾಗ ನಮ್ಮದು ರೂ.2,00,000/- ನನ್ನ ಗಂಡನ ರೂ.2,00,000/- ಒಟ್ಟು ರೂ.4,00,000/- ಮಾತುಕತೆಯಾಗಿತ್ತು. ಆ ರೀತಿ ರೂ.4,00,000/- ಗಳಿಗೆ ಮಾತುಕತೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಿ.ಟಿ ಸರ್ವೆ ನಂಬರಃ 173/ಬಿ ಈ ಆಸ್ತಿಯು ಒಟ್ಟು ರೂ.3,50,000/- ಮಾತುಕತೆಯಾಗಿತ್ತು ಅದರಲ್ಲಿ ರೂ.1,95,000/- ಗಳನ್ನು ನನ್ನ ಗಂಡ ಖರೀದಿ ಕರಾರು ಪತ್ರ ಆಗುವಾಗ ಮುಂಗಡವಾಗುವಾಗ ನನಗೆ ಕೊಟ್ಟಿರುತ್ತಾನೆ ಅಂದರೆ ಸರಿ.

**32)** ಆ ಬಳಿಕ ಸರ್ವೆ ನಂಬರಃ 173/ಬಿ ಈ ಆಸ್ತಿಯ ಕುರಿತಾಗಿ ನನ್ನ ಗಂಡನ ತಮ್ಮಂದಿರಾದ ರಮೇಶ, ಉಮೇಶ, ರಾಜೇಶ ಇವರು ನನ್ನ ಸಂಗಡ ಜಗಳವಾಡುತ್ತಾರೆ ಎಂದು ಮತ್ತು ಅವರಿಗೆ ಪಾಲು

ಕೊಡಬೇಕಾಗುತ್ತದೆ ಎನ್ನುವ ವಿಷಯದ ಕುರಿತಾಗಿ ನನ್ನ ಗಂಡ ನನಗೆ ಸಿ.ಟಿ ಸರ್ವೆ ನಂಬರಃ 173/ಬಿ/3 ಈ ಆಸ್ತಿಯನ್ನು ನನ್ನ ಹೆಸರಿನಲ್ಲಿ ಪೋಕಳ್ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ದಾವಾ ಶೆಡೂಲ್ ಎ ಮತ್ತು ಬಿ ಆಸ್ತಿಗಳನ್ನು ನಾನು ಖರೀದಿಗೆ ತೆಗೆದುಕೊಳ್ಳುವಾಗ ನನ್ನ ಬಳಿ ಇದ್ದಂತಹ ಬಂಗಾರವನ್ನು ಮತ್ತು ಇನ್ನಿತರೆ ಸ್ವತ್ತುಗಳನ್ನು ಮಾರಾಟ ಮಾಡಿದಂತಹ ಬಂದಂತಹ ಹಣದಿಂದ ಖರೀದಿ ಮಾಡಿಕೊಡುವ ಸಮಯದಲ್ಲಿ ರೂ.2,00,000/- ಕೊಟ್ಟಿದ್ದೇನೆ ಎನ್ನುವ ಕುರಿತಾಗಿ ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ. 1996 ನೇ ಇಸ್ವಿಯಲ್ಲಿ ನನ್ನ ಬಳಿ ಇದ್ದಂತಹ 8 ತೊಲೆ ಬಂಗಾರವನ್ನು ಮಾರಾಟ ಮಾಡಿ ರೂ.2,00,000/- ಹಣವನ್ನು ನನ್ನ ಗಂಡನಿಗೆ ಕೊಟ್ಟಿದ್ದೇನೆ ಎನ್ನುವ ಕರಿತಾಗಿ 1996 ನೇ ಇಸ್ವಿಯಲ್ಲಿ ಬಂಗಾರದ ಮೌಲ್ಯ ಒಂದು ತೊಲೆಗೆ 5 ರಿಂದ 6 ಸಾವಿರ ಇತ್ತು. 1996 ನೇ ಇಸ್ವಿಯಲ್ಲಿ ನನ್ನ ಬಳಿ ಇದ್ದಂತಹ 8 ತೊಲೆ ಬಂಗಾರವು ಇದರ ಒಟ್ಟು ಮೌಲ್ಯ ಅಂದಾಜು ರೂ.40,000/- ಗಳಷ್ಟು ಆಗಬಹುದು ಅಂದರೆ ಸರಿ. 1996 ರಲ್ಲಿ ನನ್ನ ಬಳಿ ಇದ್ದಂತಹ 8 ತೊಲೆ ಬಂಗಾರವನ್ನು ಮಾರಾಟ ಮಾಡಿ ನಾನು ನನ್ನ ಗಂಡನಿಗೆ ರೂ.2,00,000/- ಹಣವನ್ನು ಕೊಟ್ಟಿದ್ದೇನೆ ಎನ್ನುವ ಕುರಿತಾಗಿ ಈ ದಾವೆಯಲ್ಲಿ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಅಂದರೆ ಸರಿ.

**33)** ದಾವಾ ಶೆಡ್ಯೂಲ್ ಎ ಆಸ್ತಿಯಾದಂತಹ ಸಿ.ಟಿ.ಸರ್ವೆ ನಂಬರಃ 173/ಬಿ/2 ಇದರಲ್ಲಿ ಇರುವಂತಹ 5 ಮನೆಗಳನ್ನು ಕಟ್ಟಿಸಲು ಒಟ್ಟು ಎಷ್ಟು ಖರ್ಚು ಬಂದಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ಅದೇ ರೀತಿ ಸಿ.ಟಿ.ಸರ್ವೆ ನಂಬರಃ 173/ಬಿ/3 ಇದರಲ್ಲಿ ಇರುವಂತಹ 4 ಮನೆಗಳನ್ನು ಕಟ್ಟಿಸಲು ಒಟ್ಟು ರೂ.6,00,000/- ಖರ್ಚು ಬಂದಿರುತ್ತದೆ. ಸದರಿ 4

ಮನೆಗಳನ್ನು ಕಟ್ಟಿಸಲು ರೂ.6,00,000/- ಹಣವನ್ನು ನಾವೇ ಖರ್ಚು ಮಾಡಿದ್ದೇವೆ. ನಾನು ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳನ್ನು ಖರೀದಿ ಹಿಡಿಯುವಾಗ ನನ್ನ ಬಳಿ 8 ತೊಲೆ ಬಂಗಾರ ಇತ್ತು ಅಂದರೆ ಆದರೆ ಮನೆಕಟ್ಟಿಸುವಾಗ ನನ್ನ ಬಳಿ ಯಾವುದೇ ಬಂಗಾರ ಇರುವದಿಲ್ಲ ಅಂದರೆ ಸರಿ, ಆದರೆ ನಾವು ಸಾಲ ಮಾಡಿರುತ್ತೇವೆ ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ. ನಾವು ಆ ರೀತಿ ಸಾಲವನ್ನು ಐಶ್ವರ್ಯ ಮಹಿಳಾ ಬ್ಯಾಂಕ ಮತ್ತು ಮಹಾಲಕ್ಷ್ಮೀ ಕೋಆಪರೇಟಿವ್ ಬ್ಯಾಂಕನಲ್ಲಿ ಸಾಲ ಮಾಡಿದ್ದೇವೆ. ನಾವು ಐಶ್ವರ್ಯ ಮಹಿಳಾ ಬ್ಯಾಂಕಿನಲ್ಲಿ ರೂ.50,000/- ಮತ್ತು ಮಹಾಲಕ್ಷ್ಮೀ ಕೋ ಆಪರೇಟಿವ ಬ್ಯಾಂಕಿನಲ್ಲಿ 1,00,000/- ತೆಗೆದುಕೊಂಡಿದ್ದೇವೆ. ಐಶ್ವರ್ಯ ಮಹಿಳಾ ಬ್ಯಾಂಕಿನಲ್ಲಿ ರೂ.50,000/- ನೇ ಇಸ್ವಿಯಲ್ಲಿ 2009 ನೇ ಇಸ್ವಿಯಲ್ಲಿ ಪಡೆದಿರುತ್ತೇವೆ. ಮಹಿಳಾ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ರೂ.1,00,000/- ಯಾವ ಇಸ್ವಿಯಲ್ಲಿ ಪಡೆದಿರುತ್ತೇವೆ ಎಂದು ನನಗೆ ನೆನಪಿರುವದಿಲ್ಲ. ದಾವಾ ಶೆಡ್ಯೂಲ್ ಬಿ ಇರುವ 4 ಮನೆಗಳನ್ನು 2000 ಇಸ್ವಿಯಲ್ಲಿ ಕಟ್ಟಿಸಿದ್ದೇವೆ. ಆದರೆ ನಾನು ಸಾಲವನ್ನು 2009 ರಲ್ಲಿ ಪಡೆದಿರುತ್ತೇನೆ ಅಂದರೆ ಸರಿ. ಅದಕ್ಕಿಂತ ದಾವಾ ಶೆಡ್ಯೂಲ್ ಬಿ ಆಸ್ತಿಯಲ್ಲಿ 4 ಮನೆಗಳನ್ನು ಕಟ್ಟಿಸಿದ್ದೇನೆ ಅಂದರೆ ಸರಿ. ದಾವಾ ಶೆಡ್ಯೂಲ್ ಎ ಮತ್ತು ಬಿ ಅಸ್ತಿಗಳಲ್ಲಿ ನನ್ನ ಗಂಡನೇ ಮನೆಗಳನ್ನು ಆತನೇ ಹಣವನ್ನು ಖರ್ಚು ಮಾಡಿ ಕಟ್ಟಿಸಿದ್ದಾನೆ ಅಂದರೆ ಸರಿ. ನಾನು ಐಶ್ವರ್ಯ ಮಹಿಳಾ ಸಹಕಾರಿ ಬ್ಯಾಂಕಿನಲ್ಲಿ ಮತ್ತು ಮಹಾಲಕ್ಷ್ಮಿ ಬ್ಯಾಂಕಿನಲ್ಲಿ ಸಾಲ ಪಡೆದಿರುವ ಕುರಿತಾಗಿ ಈ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ.

**34)** ದಾವಾ ಶೆಡ್ಯೂಲ್ ಎ ಆಸ್ತಿಯಲ್ಲಿ 5 ಮನೆಗಳನ್ನು ದಾವಾ ಶೆಡ್ಯೂಲ್ ಬಿ ಆಸ್ತಿಯಲ್ಲಿ 4 ಮನೆಗಳನ್ನು ಪ್ರಕಾಶ ಇವರೇ ತಮ್ಮ ಸ್ವಂತ

ಹಣವನ್ನು ಖರ್ಚು ಮಾಡಿ ಕಟ್ಟಿಸಿದ್ದಾರೆ ಅಂದರೆ ಸರಿಯಲ್ಲ. ಸಿ.ಟಿ ಸರ್ವೆ ನಂಬರಃ 173/ಬಿ/2 ಈ ಆಸ್ತಿಯಲ್ಲಿ ಇರುವಂತಹ 5 ಮನೆಗಳಲ್ಲಿ 4 ಮನೆಗಳನ್ನು ಪ್ರಕಾಶ ಇವರು ಅವರು ಮಾಡಿದ ಸಾಲವನ್ನು ಮರುಪಾವತಿ ಮಾಡಲು ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ, ಆದರೆ ಅವರು ವ್ಯಾಪಾರದಲ್ಲಿ ಬಂದಂತಹ ಉತ್ಪನ್ನದಿಂದ ಸದರಿ 5 ಮನೆ ಕಟ್ಟಿಸಿದ್ದಾರೆ ಎಂದು ಉತ್ತರಿಸಿದ್ದಾರೆ. ಸಿ.ಟಿ.ಸರ್ವೆ ನಬರಃ 173/ಬಿ/2 ಈ ಆಸ್ತಿಯಲ್ಲಿ ಕಟ್ಟಿಸಿದಂತಹ 5 ಮನೆಗಳನ್ನು ಕಟ್ಟಿಸಲು ನಾವು ಒಟ್ಟು ಎಷ್ಟು ಸಾಲವನ್ನು ಪಡೆದಿದ್ದೇವೆ ಎಂದು ನನಗೆ ನೆನಪಿರುವದಿಲ್ಲ. ಸದರಿ ಸಾಲವು ಬಂಧನ ಬ್ಯಾಂಕ ಹುಬ್ಬಳ್ಳಿ ಮತ್ತು ಐಶ್ವರ್ಯ ಮಹಿಳಾ ಬ್ಯಾಂಕಿನಲ್ಲಿ ರೂ.50,000/- ಸಾಲ ಇರುತ್ತದೆ, ಅದೇ ರೀತಿ ಬಂಧನ ಬ್ಯಾಂಕ ಹುಬ್ಬಳ್ಳಿಯಲ್ಲಿ ಅಂದಾಜು ರೂ.1,00,000/- ಸಾಲ ಪಡೆದಿರುತ್ತೇವೆ.

**35)** ಬಂಧನ ಬ್ಯಾಂಕ ಹುಬ್ಬಳ್ಳಿಯಾಗಲೀ ಮತ್ತು ಐಶ್ವರ್ಯ ಮಹಿಳಾ ಬ್ಯಾಂಕಿನಲ್ಲಿ ಪಡೆದ ಸಾಲವನ್ನು ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳಲ್ಲಿ ಕಟ್ಟಿಸಿದಂತಹ ಮನೆಗಳ ಕುರಿತಾಗಿ ಸಾಲವನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಬಂಧನ ಬ್ಯಾಂಕ ಮತ್ತು ಐಶ್ವರ್ಯ ಮಹಿಳಾ ಬ್ಯಾಂಕ ಇವರು ನನ್ನ ಮತ್ತು ವಾದಿಯ ವಿರುದ್ಧ ಸಿವಿಲ್ ಪ್ರಕರಣವನ್ನು ದಾಖಲುಪಡಿಸಿದ್ದಾರೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳಲ್ಲಿ ಕಟ್ಟಿಸಿದಂತಹ ಮನೆಗಳ ಕುರಿತಾಗಿ ತೆಗೆದುಕೊಂಡ ಸಾಲಕ್ಕೆ ನಾನು ಮಾತ್ರ ಬಂದನಕಾರಿಯಾಗಿರುತ್ತೇನೆ, ಆದರೆ ವಾದಿ ಯಾವುದೇ ರೀತಿ ಸಂಬಂದ ಇರುವದಿಲ್ಲ ಎಂದು ತೀರ್ಪು ಆಗಿರುತ್ತದೆ ಅಂದರೆ ಸರಿಯಲ್ಲ. ಸದರಿ ಸಾಲವನ್ನು ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳನ್ನು ಅಡಮಾನ ಇಟ್ಟು ಸಾಲವನ್ನು ಪಡೆದಿಲ್ಲ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಅವಕಾಶ ಕೇಳಲಾಗಿ ಅವಕಾಶ ಕೊಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.